ಶ್ರೀ ಹೆಚ್.ವೈ. ಮೇಟಿ : ಶೀರ್ಘ್ರದಲ್ಲಿ ಎಂದು ಹೇಳಬೇಡಿ. ಎಷ್ಟು ದಿವಸದಲ್ಲಿ ಮಾಡಿಕೊಡುತ್ತೀರಿ? ಅಲ್ಲಿ ಎರಡು ಸಾವಿರ ಜನಸಂಖ್ಯೆವಿರುವ ರೈತರ ಊರು ಮಳೆ ಬಂತು ಎಂದರೆ ದಂಡೆಯ ಆಚೆಕಡೆಗೆ ಬಂಡಿ ನಿಲ್ಲಬೇಕು. ಮರುದಿವಸ ಮುಂಜಾನೆ ರಸ್ತೆ ಮಾಡಿಯೇ ಆ ಬಂಡಿಯನ್ನು ತರಬೇಕು. ಈ ಪರಿಸ್ಥಿತಿ ಇದೆ. ಈ ಮೊದಲೇ ನಾನು ಮಾನ್ಯ ಯಡಿಯೂರಪ್ಪನವರಿಗೂ ಮನವಿ ಮಾಡಿದ್ದೇನೆ. CMGSY, ಅಥವಾ ಮುಖ್ಯಮಂತ್ರಿಗಳ ಪರಿಹಾರ ನಿಧಿ, ಅಥವಾ ಫ್ಲಡ್‌ನಲ್ಲಾಗಲೀ ಯಾವುದರಲ್ಲಿ ಹಣ ಕೊಡುತ್ತೀರಿ ಹೇಳಿ.

ಶ್ರೀ ಸಿ.ಎಂ. ಉದಾಸಿ : ನಾನು ಅವರ ಹತ್ತಿರ ಖಾಸಗಿಯಾಗಿ ಮಾತನಾಡಿದಾಗ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದೇನೆ. ಅವರೇನು ಇವತ್ತು ಹಣ ಕೊಡಲಿಕ್ಕೆ ಒಪ್ಪಿದ್ದಾರೆ ಅದಕ್ಕೆ ಪ್ರಸ್ತಾವನೆಯನ್ನು ಕೊಟ್ಟ ಕೂಡಲೇ ಉಪ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ ಅತಿ ಶೀರ್ಘ್ರದಲ್ಲಿ ಅದನ್ನು ಮಾಡಿಸಿ ಕೊಡುತ್ತೇವೆ.

ಶ್ರೀ ಹೆಚ್.ವೈ. ಮೇಟಿ : ಜಿಲ್ಲಾ ಪರಿಷತ್ತಿನಲ್ಲಿ ದುಡ್ಡು ಇದೆ, ಅದನ್ನು ಮಾಡಿಸಿಕೊಡಿ.

ಆ) ವಿಷಯ : ಲಕ್ಷೇಶ್ವರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ

ಶ್ರೀ ಜಿ.ಎಸ್. ಗಡ್ಡದೇವರ್ ಮಠ್ (ಶಿರಹಟ್ಟಿ) : ಮಾನ್ಯ ಉಪಾಧ್ಯಕ್ಷರೆ, ಲಕ್ಷೇಶ್ವರವನ್ನು ತಾಲ್ಲೂಕು ಕೇಂದ್ರವನ್ನಾಗಿ ಘೋಷಿಸುವ ಬಗ್ಗೆ ಸನ್ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ.

ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ. ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ಘೋಷಣೆ ಮಾಡಲಾಗುವುದು.

ರಾಜ್ಯ ಸರ್ಕಾರವು ಆಡಳಿತವನ್ನು ಚುರುಕುಗೊಳಿಸುವ ದೃಷ್ಟಿಯಿಂದ ಬಹಳ ಹಿಂದೆ ರಾಜ್ಯದಲ್ಲಿನ ಜಿಲ್ಲೆ, ಉಪ ವಿಭಾಗ ಹಾಗೂ ತಾಲ್ಲೂಕುಗಳ ಪುನರ್ ವಿಂಗಡಣೆ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಶ್ರೀ ವಾಸುದೇವರಾವ್ ಆಯೋಗ (1973), ಶ್ರೀ ಬಿ.ಎಂ. ಹುಂಡೇಕರ್ ಸಮಿತಿ (1984) ಹಾಗೂ ಶ್ರೀ ಪಿ.ಸಿ. ಗದ್ದಿಗೌಡರ್ (1986) ಇವರುಗಳ ಅಧ್ಯಕ್ಷತೆಯಲ್ಲಿ ಮೂರು ಸಮಿತಿಗಳನ್ನು ರಚಿಸಿತ್ತು. ಈ ಸಮಿತಿಗಳು ಒಟ್ಟು 35 ತಾಲ್ಲೂಕುಗಳ ರಚನೆಗೆ ಶಿಫಾರಸ್ಸು ಮಾಡಿರುತ್ತವೆ. ಇವುಗಳ ಪೈಕಿ "ಲಕ್ಷೇಶ್ವರವೂ" ಸೇರಿರುತ್ತದೆ. ಆದರೆ ಅದನ್ನು ಸೇರಿಸಬೇಕೋ ಇಲ್ಲವೋ ಎನ್ನುವುದನ್ನು ಹೊಸ ತಜ್ಞರ ಸಮಿತಿ ಪರಿಶೀಲಿಸುವುದು. ಬೆಳಿಗ್ಗೆ ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದ.

ಅವರು ನಿರ್ದಿಷ್ಟವಾಗಿ ಲಕ್ಷ್ಮೇಶ್ವರ ಬಗ್ಗೆ ಹೇಳಿದ್ದಾರೆ. ಹಿಂದೆ ಸಮಿತಿಗಳು ಮಾಡಿದಂಥ ಸಂದರ್ಭದಲ್ಲಿಯೂ ಕೂಡ ಆ ಸಮಿತಿಗಳು ಲಕ್ಷ್ಮೇಶ್ವರವನ್ನು ರೆಕ್‌ಮೆಂಡ್ ಮಾಡಿವೆ. ಹೀಗಾಗಿ ಹೊಸ ತಜ್ಞರ ಸಮಿತಿಯು ಹಳೆಯ ಸಮಿತಿಯ ವರದಿಗಳನ್ನು ಕೂಡ ಕನ್ಸಿಡರ್ ಮಾಡುತ್ತಾರೆ. ಅದಕ್ಕೆ ಸರಿಯಾದ ರೀತಿಯಲ್ಲಿ ಗಮನಹರಿಸುತ್ತೇವೆ ಮತ್ತೆ ಅದಕ್ಕೆ ಸ್ಪಂದಿಸುತ್ತೇವೆ.

ಶ್ರೀ ಜಿ.ಎಸ್. ಗಡ್ಡದೇವರ್ ಮಠ್ (ಶಿರಹಟ್ಟಿ) : ತಮ್ಮ ಮುಖೇನವಾಗಿ ವಿಶೇಷವಾಗಿ ನಾನು ನನ್ನ ಕ್ಷೇತ್ರದ ಜನರ ಪರವಾಗಿ ಸನ್ಮಾನ್ಯ ಕಂದಾಯ ಸಚಿವರನ್ನು ಅಭಿನಂದಿಸುತ್ತೇನೆ. ಏಕೆಂದರೆ, ಲಕ್ಷ್ಮೇಶ್ವರದ್ದು ಬಹಳ ದಿವಸದ ಬೇಡಿಕೆ, ಇದನ್ನು ತಾಲ್ಲೂಕನ್ನಾಗಿ ಮಾಡವುದು ಎಷ್ಟು ಬೇಡಿಕೆ ಇತ್ತೋ ಅಷ್ಟೆ ಬೇಡಿಕೆ ಇಲ್ಲಿ ಒಂದು ಸಬ್ ರಿಜಿಸ್ಟ್ರಾರ್ ಕಛೇರಿ ಮಾಡುವುದು ಇತ್ತು. ಅಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಯನ್ನು ಪ್ರಾರಂಭಿಸುವುದರ ಮೂಲಕ ಅವರು ವಿಶೇಷವಾಗಿ ಆ ಜನರ ಪ್ರೀತಿಗೆ ಪಾತ್ರರಾಗಿದ್ದಾರೆಂದು ಹೇಳುತ್ತೇನೆ. ಏಕೆಂದರೆ, ಮಾಡಿರುವ ಒಳ್ಳೆಯ ಕೆಲಸವನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಅದರ ಜೊತೆಗೆ ಇವತ್ತು ನಮಗೆ ಕಳವಳ ಹುಟ್ಟಿದ್ದು ಏನೆಂದರೆ, ಈಗಾಗಲೇ ನಾವು ಬಹಳ ಖುಷಿಯಿಂದ ಇದ್ದೆವು. ಏನೆಂದರೆ, 2001–2002ರ ಈಚೆಗೆ ಶ್ರೀಕಂಠಯ್ಯನವರು ಕಂದಾಯ ಸಚಿವರಾಗಿದ್ದಂಥ ಸಂದರ್ಭದಲ್ಲಾಗಲಿ, ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಕಂದಾಯ ಸಚಿವರಾಗಿದ್ದಂಥ ಸಂದರ್ಭದಲ್ಲಾಗಲಿ, ನಾವು ಈ ಮನೆಯಿಂದ ಈ ಪ್ರಕಾರ ಪ್ರಶ್ನೆ ಕೇಳಿದಾಗ, ನಾವು ನೀರಿಕ್ಷೆ ಮಾಡಿದ್ದು ಏನೆಂದರೆ, ಒಂದೇ ಒಂದು ಉತ್ತರ ಅದೇನೆಂದರೆ, ಎಲ್ಲಿಯವರೆಗೆ ಡಿ–ಲಿಮಿಟೇಷನ್ ಆಗುವುದಿಲ್ಲ ಅಲ್ಲಿಯವರೆಗೆ ರೀಆರ್ಗನೈಜೇಷನ್ ಆಗುವುದಿಲ್ಲ ಹೀಗಾಗಿ ನೀವು ತಡೆದುಕೊಳ್ಳಬೇಕಾಗುತ್ತದೆ ಎನ್ನುವ ವಿಚಾರವನ್ನು ಹೇಳುತ್ತಿದ್ದರು. ಆದರೆ ಜೊತೆಗೆ ಇನ್ನೊಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದರು. ಈಗಾಗಲೇ ನಾವು ಸ್ಪೆಷಲ್ ತಹಶೀಲ್ದಾರ್‌ನನ್ನು ಏನು ನೇಮಕಾತಿ ಮಾಡಿದೇವೆ, ಸರ್ಕಾರ ತಾಲ್ಲೂಕು ಕೇಂದ್ರವನ್ನಾಗಿ ಮಾಡುವುದಕ್ಕೆ ಇಟ್ಟಂಥ ಪ್ರಥಮ ಹೆಜ್ಜೆ. ಅಂದರೆ ಯಾವುದೇ ಪರಿಸ್ಥಿತಿಯಲ್ಲಿ ನಿಮ್ಮದು ತಾಲ್ಲೂಕು ಆಗುತ್ತದೆಂದು ಅವರು ಉತ್ತರದಲ್ಲಿ ಹೇಳುತ್ತಿದ್ದರು. ಆದರೆ, ನಮಗೆ ಈಗ ಕಳವಳವನ್ನು ಹುಟ್ಟಿಸಿದ ಪ್ರಸಂಗ ಎಂದರೆ, ಹೊಸ ತಜ್ಞರ ಸಮಿತಿಯನ್ನು ರಚನೆ ಮಾಡಬೇಕೆಂದು ಹೇಳಿದ್ದಾರೆ. ಕಟ್ಟಕಡೆಯ ಒಂದು ಕಮಿಷನ್ ರಿಪೋರ್ಟ್ 1986 ನೇ ಇಸ್ವಿಯಲ್ಲಿ ಅಂದರೆ ಗದ್ದಿಗೌಡರ್ ಕಮಿಷನ್ ರಿಪೋರ್ಟ್ ಮಾಡಿ, ಸುಮಾರು 20 ವರ್ಷಗಳಾಗಿವೆ. ಅಲ್ಲಿಂದ ಇಲ್ಲಿಯವರೆಗೆ ತಾಲ್ಲೂಕು ಕೇಂದ್ರವಾಗಬೇಕಾದರೆ infrastructure ಏನು ಬೇಕೋ ಹೆಚ್ಚಿನ ಮಟ್ಟದಲ್ಲಿ ಆಗಿದೆ. ಅದಕ್ಕೆ ಈ ಹೊಸ ತಜ್ಞರ ಸಮಿತಿ, ಮೂರು ಸಮಿತಿಗಳು ಶಿಫಾರಸ್ಸು ಮಾಡಿದಂಥ ಸ್ಥಳಗಳಿಗೂ ಅನ್ವಯಿಸುತ್ತದೋ ಅಥವಾ ಹೊಸದಾಗಿ ನಿಮ್ಮ ಹತ್ತಿರ

ತಾಲ್ಲೂಕು ಕೇಂದ್ರ ಸ್ಥಳವೆಂದು ಬೇಡಿಕೆ ಏನು ಬಂದಿವೆ, ಅವುಗಳಿಗೆ ಮಾತ್ರ ಅನ್ವಯಿಸುತ್ತದೋ? ಇದು ನಮಗೆ ಕಳವಳವನ್ನುಂಟು ಮಾಡಿದೆ. ಆದರೆ, ನನ್ನ ಪ್ರಾಮಾಣಿಕ ಅಭಿಪ್ರಾಯ ಏನೆಂದರೆ, ತಾವು ಸಹಿತ ಲಕ್ಷ್ಮೇಶ್ವರವನ್ನು ಬಹಳ ಹತ್ತಿರದಿಂದ ಬಲ್ಲವರಾಗಿದ್ದೀರಿ. ಬಹಳದಿವಸಗಳಿಂದ ಅದರ ಬಗ್ಗೆ ಬೇಡಿಕೆ ಏನು ಇದೆ ಎಂಬುದು ತಮಗೆ ಗೊತ್ತಿದೆ. ನೀವು ತಜ್ಞರ ಸಮಿತಿ ರಚನೆ ಮಾಡಿ. ಹೊಸ ತಾಲ್ಲೂಕು ಮಾಡಿ ಎಂದು ಹೊಸದಾಗಿ ಪ್ರಸ್ತಾವನೆ ಏನು ಬರುತ್ತವೆ ಅವುಗಳನ್ನು ಆ ಸಮಿತಿಗೆ ಕೊಡಿ. ಈ ಮೂರು ಸಮಿತಿಗಳು ಒಪ್ಪಿದಂಥದ್ದಕ್ಕೆ ಪುನಃ ಏಕೆ ಕೊಡುತ್ತೀರಿ ಎಂಬುದು ನಮ್ಮ ಪ್ರಶ್ನೆ.

ಉಪಾಧ್ಯಕ್ಷರು : ಗಮನ ಸೆಳೆಯುವ ಸೂಚನೆಯಲ್ಲಿ ಕ್ಲಾರಿಫೀಕೇಷನ್ ಒಂದು ಅಥವಾ ಎರಡು ಕೇಳಬೇಕು. ಅದು ಬಿಟ್ಟು ನೀವು ಭಾಷಣ ಮಾಡುತ್ತಿರಲ್ಲ. ಬೆಳಿಗ್ಗೆ ಈ ಬಗ್ಗೆ ಮಾತನಾಡಿದಿರಿ ಅಲ್ಲವೆ? ಒಂದು? ಗಂಟೆ ಮಾತನಾಡಿದಿರಿ. ಮತ್ತೆ ಮತ್ತೆ ಅದನ್ನೇ ಹೇಳುತ್ತಿರಲ್ಲ. ಮಂತ್ರಿಗಳು ತಾವು ಉತ್ತರ ಹೇಳಿ. ದಯವಿಟ್ಟು ನೀವು ಕುಳಿತುಕೊಳ್ಳಿ. ಅವರು ನೀವು ಹೇಳಿದ್ದಕ್ಕೆ ಉತ್ತರ ಹೇಳುತ್ತಾರೆ ಬಿಡಿ ಕುಳಿತುಕೊಳ್ಳಿ.

ಶ್ರೀ ಜಿ.ಎಸ್. ಗಡ್ಡದೇವರ್ ಮಠ್ (ಶಿರಹಟ್ಟಿ) : ಮೂರು ಸಮಿತಿಗಳು ಒಪ್ಪಿದ ಮೇಲೆ ಮತ್ತೆ ಏಕೆ ಈ ತಜ್ಞರ ಸಮಿತಿ ಬೇಕು?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರು ಭಾವನೆಗಳನ್ನು ವ್ಯಕ್ತಪಡಿಸಿದ್ದೀರಿ. ಈಗಾಗಲೇ ಲಕ್ಷ್ಮೇಶ್ವರಕ್ಕೆ ಸಬ್ ರಿಜಿಸ್ಟ್ರಾರ್ . ಮತ್ತೆ ಅವರು ವಿಶೇಷ ತಹಶೀಲ್ದಾರ್. ಅದಷ್ಟು ಬೇಗನೇ ಅದನ್ನು ಪ್ರಾರಂಭ ಮಾಡುತ್ತೇನೆ, ಅವು ತಾಲ್ಲೂಕು ಕೇಂದ್ರವಾಗುತ್ತದೆನ್ನುವ ಭಾವನೆ ಬಂದಿದೆ ಎನ್ನುವ ಮಾತನ್ನು ಹೇಳಿದರು. ಆ ಒಂದು ಕೆಲಸದ ಒತ್ತಡ ಇವೆನ್ನೆಲ್ಲಾ ನೋಡಿಕೊಂಡೇ ನಾವು ಈ ವಿಶೇಷ ತಹಶೀಲ್ದಾರ್ ಕಛೇರಿ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಅದರಲ್ಲಿ ಕೆಲವು ಇಂಥವುಗಳನ್ನು ತಾಲ್ಲೂಕು ಮಾಡಲೇಬೇಕೆಂದು ಹೇಳಿದ್ದಾರೆ. ಆ ಕಮಿಟಿಯಲ್ಲಿ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅದನ್ನು ಕನ್ಸಿಡರ್ ಮಾಡಿ ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ನಾವು ಅವರಿಗೆ ಪಾಯಿಂಟ್ ಆಫ್ ರೆಫರೆನ್ಸ್‌ನ್ನು ಹೊಸ ಕಮಿಟಿಯವರಿಗೆ ಕೊಡುತ್ತೇವೆ. ಮುಖ್ಯವಾಗಿ ಹೊಸ ತಜ್ಞರ ಕಮಿಟಿ ಮಾಡುತ್ತಿರುವುದು, ಹೊಸದಾಗಿ ಕೆಲವು ಬೇಡಿಕೆಗಳೇನು ಬಂದಿವೆ, ಒಟ್ಟು 85 ರಿಂದ 90 ಹೊಸ ಸ್ಥಳಗಳಲ್ಲಿ ತಾಲ್ಲೂಕುಗಳನ್ನು ಮಾಡಬೇಕೆನ್ನುವ ಬೇಡಿಕೆ ಬಂದಿದೆ. ಈ ಎಲ್ಲಾ ಕನ್ಸಿಡರೇಷನ್ ಮಾಡುವ ದೃಷ್ಟಿಯಿಂದ ಮಾಡುತ್ತಿದ್ದೇವೆ ಮತ್ತು ಹಳೆಯ ಕಮಿಟಿಗಳು ಏನು ಮಾಡಿವೆ, ಅದಕ್ಕೆ ಪ್ರಾಶಸ್ಯ ಇದ್ದೇ ಇರುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರು ಮೂರು ಕಮಿಟಿಯ ವರದಿ ಬಂದ ಮೇಲೆ ನೀವು ಪುನಃ ನಾಲ್ಕನೇ ಕಮಿಟಿ ಮಾಡಿ 80-90

ಅರ್ಜಿಗಳು ಬಂದಿವೆ, ಅದಕ್ಕೆ ನಾವು ಕಮಿಟಿ ಮಾಡಿದೆವು ಎಂದರೆ ಹೇಗೆ? ಮೊದಲು ಮೂರು ಕಮಿಟಿಯ ರಿಪೋರ್ಟನ್ನು ಇಂಪ್ಲಿಮೆಂಟ್ ಮಾಡಿ. ಆಮೇಲೆ ಉಳಿದರೆ ಅದಕ್ಕೇನು ಮಾಡಬೇಕೆನ್ನುವ ಯೋಚನೆ ಮಾಡಿ. ಈಗಾಗಲೇ ನಮ್ಮ ಶಿರಹಟ್ಟಿ ಶಾಸಕರು ಹೇಳಿದ ಹಾಗೆ, ಯಾವ್ಯಾವ ತಾಲ್ಲೂಕುಗಳನ್ನು ಮಾಡಬೇಕೆಂದು ಅಲ್ಲಿ ಸ್ಪೆಷಲ್ ತಹಶೀಲ್ದಾರ್‌ಗಳನ್ನು ಹಿಂದಿನ ಸರ್ಕಾರದಲ್ಲಿ ನೇಮಕ ಮಾಡಿತ್ತು ನೀವು ಅದನ್ನೇ ಮುಂದುವರಿಸಿದಿರಿ. ಈಗ ಆ ರೀತಿಯಾಗಿ ನಿಗದಿಯಾದ ಮೇಲೆ ಅಲ್ಲಿಂದ ಪುನಃ ಶಿಫ್ಟ್ ಮಾಡುವುದು ಸಾಧ್ಯವಿಲ್ಲದ ಕೆಲಸ, ಏಕೆಂದರೆ ಜನ ಸುಮ್ಮನಿರುವುದಿಲ್ಲ. ನೀವಾಗಿ ಜನರನ್ನು ರೊಚ್ಚಿಗೆಬ್ಬಿಸಿದ ಹಾಗೆ ಆಗುತ್ತದೆ. ಅದಕ್ಕಾಗಿ ಈಗಾಗಲೇ ಗುರುತಿಸಿದಂಥ ಜಾಗಗಳೇನು ಇವೆ, ಅವುಗಳನ್ನು ಮೊದಲು ಘೋಷಣೆ ಮಾಡಿ. ಆಮೇಲೆ ಉಳಿದಿದ್ದಕ್ಕೆ ಹೊಸ ಸಮಿತಿ ಮಾಡಿ. ನೀವು ಬೇಕಾದಾಗ ಜಿಲ್ಲೆಗಳು, ಬೇಕಾದಾಗ ಒಂದು ಹೊಸ ಸಮಿತಿ, ನಿಮಗೆ ತಾಲ್ಲೂಕುಗಳು ಬೇಕಾದಾಗ ಹೊಸ ಸಮಿತಿ, ಮಾಡುವುದು ಸರಿಯಲ್ಲ. ನಮ್ಮಲ್ಲೀಗ 176 ತಾಲ್ಲೂಕುಗಳು ಇವೆ. ಕೆ.ಆರ್. ಪುರ, ಎಲ್ಲಾ ಸೇರಿ 177 ಆಗಿದೆ. 177 ತಾಲ್ಲೂಕುಗಳಿವೆ. ಪುನಃ 90 ಅರ್ಜಿಗಳು ಬಂದಿವೆ ಎಂದರೆ, ನಾವು ಅಷ್ಟು ಮಾಡುವುದಕ್ಕೆ ಆಗುತ್ತದೆಯೇ? ಅದಕ್ಕಾಗಿ ಈಗ ಏನು ಮೂರು ಕಮಿಟಿಗಳ ರಿಪೋರ್ಟ್ ಬಂದಿದೆ, ನೀವು ಈಗಾಗಲೇ ತಹಶೀಲ್ದಾರ್‌ಗಳನ್ನು ಹಾಕಿದಿರಿ, ಮೊದಲು ಅದನ್ನು ಅನುಷ್ಠಾನದಲ್ಲಿ ತನ್ನಿ. ನಂತರ ಉಳಿದಿರುವುದಕ್ಕೆ ಏನು ಮಾಡಬೇಕೆಂದು ಆಲೋಚನೆ ಮಾಡಿ. ಸುಮ್ಮನೆ ಇದನ್ನು ಅನಾವಶ್ಯಕವಾಗಿ ಮುಂದುವರಿಸಿಕೊಂಡು ಹೋಗುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಹೊಸ ತಜ್ಞರ ಸಮಿತಿ ರಚಿಸಿದ್ದೇವೆಂದು ಹೇಳಿದಿರಿ. ತಾವು ಇದನ್ನು ರಚಿಸಿದ್ದೀರಾ? ಇದು ಯಾವಾಗ ಬರುತ್ತದೆ? ನಿಮ್ಮ ಬೇಡಿಕೆಗಳು 90 ಇವೆ. ಸ್ವಲ್ಪ ಹೆಚ್ಚು ಕಡಿಮೆ ನೀವು ಎಲ್ಲರನ್ನು ಸಮಾಧಾನಪಡಿಸಬೇಕು. ಒಂದೊಂದು ಹೋಬಳಿಗೊಂದು ತಾಲ್ಲೂಕು ಮಾಡಿಬಿಡಿ. ಇದಕ್ಕೊಬ್ಬ ತಹಶೀಲ್ದಾರ್, ಅದಕ್ಕೊಂದು ತಾಲ್ಲೂಕು ಕಾರ್ಯಾಲಯ. ಎರಡೆರೆಡು ತಾಲ್ಲೂಕು ಒಂದು ಜಿಲ್ಲೆ. ಏಕೆಂದರೆ, ಸುಭಿಕ್ಷವಾಗಿ ಮಾಡುವುದರಿಂದ ನಿಮ್ಮ ಕಾಲದಲ್ಲಿ ಒಂದು ಇತಿಹಾಸ ನಿರ್ಮಾಣವಾಗುತ್ತದೆ. ನೀವು ಈ ಸಮಿತಿಯನ್ನು ಮಾಡುವುದು ಯಾವಾಗ? ಈಗಾಗಲೇ ಹುಂಡೇಕರ್ ಮತ್ತು ಇತರೆ ಸಮಿತಿಗಳನ್ನು ರಚನೆ ಮಾಡಿದ್ದು, ಸದರಿ ಸಮಿತಿಗಳು ವರದಿಯನ್ನೂ ಸಹ ಕೊಟ್ಟಿದ್ದಾರೆ. ಅವರು ಕೊಟ್ಟಿರುವ ವರದಿಯನ್ನು ತಾವು ಏನು ಮಾಡುತ್ತೀರಿ? ನೀವು ಈಗ ಹೇಳಿರತಕ್ಕಂಥದ್ದು ಬಹಳ ಅಪಾಯಕಾರಿಯಾಗಿದೆ. ಇಲ್ಲಿ ತಾವು ಏನು ಹೇಳಿದ್ದೀರೆಂದರೆ, ಇವುಗಳ ಪೈಕಿ ಲಕ್ಷ್ಮೇಶ್ವರವೂ ಸೇರುತ್ತದೆ. ಆದರೆ, ಅದನ್ನು ಸೇರಿಸಬೇಕೋ ಇಲ್ಲವೋ ಎನ್ನುವುದನ್ನು ಹೊಸ ತಜ್ಞರ ಸಮಿತಿ ಪರಿಶೀಲಿಸುವುದೆಂದು ಹೇಳಿದ್ದೀರಿ.

ಅಂದರೆ, ಇಲ್ಲಿ ಮತ್ತೆ ಅಪಾಯ ತಂದಿಟ್ಟದ್ದೀರಿ. ಇದನ್ನು ಸೇರಿಸಬೇಕೋ ಅಥವಾ ಇಲ್ಲವೋ ಎಂಬುದನ್ನು ಅವರು ತೀರ್ಮಾನ ಮಾಡುವುದು ಏಕೆ? ಈಗಾಗಲೇ ತೀರ್ಮಾನವಾಗಿರುವುದು ನಿಮಗೆ ಸಾಕಾಗಲಿಲ್ಲವೇ? ಸೇರಿಸಬೇಕೆಂದು ಈಗಾಗಲೇ ವರದಿ ನೀಡಿರತಕ್ಕಂಥ ಸಮಿತಿಗಳು ಹೇಳಿವೆ. ಮುಂದಿನ ಸಮಿತಿ ಇದನ್ನು ಸೇರಿಸಬೇಕೋ ಅಥವಾ ಇಲ್ಲವೇ ಎಂದು ತೀರ್ಮಾನ ಮಾಡಿದರೆ ಅವರ ಗತಿ ಏನು? ಈ ರೀತಿಯಾಗಿ ನೀವು ಹೇಳಿದರೆ ಅವರಿಗೆ ರಾತ್ರಿ ನಿದ್ದೆ ಬರುತ್ತದೆಯೇ?

ಶ್ರೀ ಕೆ. ಅಭಯಚಂದ್ರ : ಈಗ ವಿಶೇಷ ತಹಶೀಲ್ದಾರ್ ಹಾಕಿರುವ ಕಡೆ ತಾಲ್ಲೂಕು ಎಂದು ಘೋಷಣೆ ಮಾಡಬೇಕಾಗುತ್ತದೆ. ಆನಂತರ ಮತ್ತೆ ಹೊಸ ತಾಲ್ಲೂಕುಗಳನ್ನು ಮಾಡತಕ್ಕಂಥ ಕೆಲಸ ಮಾಡಿ. ಇಲ್ಲದಿದ್ದರೆ ನಮಗೆ ಅನ್ಯಾಯವಾಗುತ್ತದೆ, ನಾವು ಬಹಳಷ್ಟು ಸಮಯದಿಂದ ಕಾಯುತ್ತಿದ್ದೇವೆ. ಹೊಸ ಕಮಿಟಿಯನ್ನು ಮಾಡಲಾಗುತ್ತದೆಂದು ತಾವು ಹೇಳುತ್ತಿದ್ದೀರಿ. ಈಗ ಹೊಸದಾಗಿ ರಚನೆ ಮಾಡುವ ಕಮಿಡಿ ವರದಿ ಕೊಡುವುದು ಯಾವಾಗ? ಈಗ ರಾಮನಗರವನ್ನು ಜಿಲ್ಲಾ ಕೇಂದ್ರವನ್ನಾಗಿ ಘೋಷಣೆ ಮಾಡಿರುವ ಹಾಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥ ಮೂಡಬಿದರೆ, ಕಡಬವನ್ನು ತಾಲ್ಲೂಕು ಕೇಂದ್ರವನ್ನಾಗಿ ಈಗಲೇ ಘೋಷಣೆ ಮಾಡುವುದು ಒಳ್ಳೆಯದು.

ಶ್ರೀ ಎನ್. ಯೋಗೀಶ ಭಟ್ : ಮಾನ್ಯ ಉಪಾಧ್ಯಕ್ಷರೆ, ದೊಡ್ಡ ತಾಲ್ಲೂಕುಗಳ ಬಗ್ಗೆ ಹೇಳುತ್ತಿದ್ದೇನೆ. ಉದಾಹರಣೆಗೆ ಮಂಗಳೂರು ತಾಲ್ಲೂಕು ತುಂಬಾ ದೊಡ್ಡದಾಗಿರುವುದರಿಂದ ತಹಸೀಲ್ದಾರ್‌ರವರು ಎಲ್ಲಾ ಕಡೆ ಹೋಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಮೂಡಬಿದರೆ ತಾಲ್ಲೂಕು ಮತ್ತು ಪುತ್ತೂರಿನಲ್ಲಿ ಕಡಬ ತಾಲ್ಲೂಕು ಬೇರೆಯಾದರೆ ನಿಜವಾಗಿಯೂ ಅನುಕೂಲವಾಗುತ್ತದೆ. ಆದ್ದರಿಂದ, ಇದನ್ನು ವಿಶೇಷವಾಗಿ ಪರಿಗಣಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಭಯ ಚಂದ್ರ : ಮಂಗಳೂರು ತಾಲ್ಲೂಕಿನಲ್ಲಿ 5 ಜನ ಶಾಸಕರಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೋಸ್ಕರವೇ ಇವೆಲ್ಲವನ್ನೂ ವಿಚಾರ ಮಾಡಬೇಕಾಗುತ್ತದೆ. ಇವತ್ತು ಬೆಳಿಗ್ಗೆ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇವತ್ತು ನಮ್ಮ ಶಾಸಕರೆಲ್ಲರೂ ಇದರ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಈಗಾಗಲೇ ಸಮಿತಿಗಳು ವರದಿಯನ್ನು ಕೊಟ್ಟಿದ್ದು, ಅದರ ಪ್ರಕಾರ, ಮಾನ್ಯ ಸದಸ್ಯರು ಹೇಳಿರುವ ಪ್ರಕಾರ ಆ ತಾಲ್ಲೂಕನ್ನು ಮೊದಲು ಘೋಷಣೆ ಮಾಡಿ ಎಂದು ಮಾನ್ಯ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರೂ ಸಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ತಜ್ಞರ ಸಮಿತಿ ರಚನೆ ಮಾಡಲಾಗಿದೆಯೋ ಅಥವಾ ಇಲ್ಲವೋ ಎಂದು ಮಾನ್ಯ ವಾಟಾಳ್ ನಾಗರಾಜ್‌ರವರು ಈಗಾಗಲೇ

ಪ್ರಸ್ತಾಪ ಮಾಡಿದ್ದರು. ಇಲ್ಲಿಯವರೆಗೆ ತಜ್ಞರ ಸಮಿತಿ ರಚನೆ ಮಾಡಿಲ್ಲ. ಏಕೆ ಆಗಲಿಲ್ಲವೆಂಬುದರ ಬಗ್ಗೆ ಈಗಾಗಲೇ ಚರ್ಚೆ ಕೂಡ ಆಗಿದೆ. ಡೇ–ಲಿಮಿಟೇಶನ್ ಕಮಿಟಿ ಅಂತಿಮವಾದಂಥ ಒಂದು ತೀರ್ಪನ್ನು ತೆಗೆದುಕೊಳ್ಳುವವರೆಗೆ ಇದನ್ನು ಮಾಡುವುದಕ್ಕೆ ಬರುತ್ತಿರಲಿಲ್ಲ. ಆದರೆ, ಡಿ–ಲಿಮಿಟೇಶನ್ ಕಮಿಟಿ ಈಗಾಗಲೇ ತೀರ್ಪನ್ನು ತೆಗೆದುಕೊಂಡಿದೆ ಮತ್ತೆ ನೋಟಿಫಿಕೇಶನ್ ಕೂಡ ಇಷ್ಯೂ ಆಗಿದೆ. ಈಗ ಯಾವುದೇ ಸಮಸ್ಯೆಗಳಿಲ್ಲ. ಆದ್ದರಿಂದ, ಸರ್ಕಾರ ಇದರ ಬಗ್ಗೆ ವಿಚಾರ ಮಾಡಿ ಒಂದು ತಜ್ಞರ ಸಮಿತಿ ಮಾಡಿಕೊಂಡು ಇದರ ಬಗ್ಗೆ ಅವಲೋಕನ ಮಾಡುವುದಕ್ಕೋಸ್ಕರ ಸಮಿತಿಯಿಂದ ಒಂದು ವರದಿಯನ್ನು ಪಡೆದುಕೊಳ್ಳುತ್ತೇವೆ. ಇದರ ಬಗ್ಗೆ ಅಂತಿಮವಾಗಿ ಸರ್ಕಾರವೇ ನಿರ್ಣಯವನ್ನು ತೆಗೆದುಕೊಳ್ಳುತ್ತೇದೆ. ಆದ್ದರಿಂದ, ಇವತ್ತಿನ ದಿವಸ ಶಾಸಕರು ವ್ಯಕ್ತಪಡಿಸಿರುವ ಭಾವನೆಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡು ಹಿಂದಿನ ಕಮಿಟಿಯವರು ಕೊಟ್ಟಿರುವ ವರದಿಯಲ್ಲಿ ಲಕ್ಷ್ಮೀಶ್ವರ ಮತ್ತು ಮತ್ತೊಂದು ಇರಬಹುದು, ಒಟ್ಟಿನಲ್ಲಿ ಅವರು ವರದಿಯಲ್ಲಿ ಹೇಳಿರುವಂಥವುಗಳನ್ನು ಪರಿಗಣನೆಗೆ ತೆಗೆದುಕೊಂಡು ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಹೊಸ ತಜ್ಞರ ಸಮಿತಿಯನ್ನು ಯಾವಾಗ ರಚನೆ ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ : ಇನ್ನೂ ರಚನೆ ಮಾಡಿಲ್ಲ. ಈಗ ರಚನೆ ಆಗುತ್ತದೆಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಏತಕ್ಕಾಗಿ ರಚನೆ ಮಾಡುತ್ತಿದ್ದೀರೆಂದು ನನಗೆ ಅರ್ಥವಾಗಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ವಾಸುದೇವರಾವ್‌ರವರ ಆಯೋಗ 1973ರಲ್ಲಿ ರಚನೆ ಮಾಡಲಾಗಿತ್ತು ಮತ್ತು ಹುಂಡೇಕರ್ ಸಮಿತಿ 1984ರಲ್ಲಿ ಹಾಗೂ ಗದ್ದೀಗೌಡರ್ ಸಮಿತಿಯನ್ನು 1986ರಲ್ಲಿ ರಚನೆ ಮಾಡಲಾಗಿತ್ತು. ಈ ಸಮಿತಿಗಳನ್ನು ರಚನೆ ಮಾಡಿ ಸುಮಾರು 30 ವರ್ಷಗಳಾಗಿವೆ. ಆದ್ದರಿಂದ, ಅವತ್ತು ನೀಡಿರುವ ವರದಿ ಇವತ್ತು ಎಷ್ಟರಮಟ್ಟಿಗೆ ಪ್ರಸ್ತುತವಾಗುತ್ತದೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಮತ್ತೆ ಸದರಿ ವರದಿಗಳಲ್ಲಿರತಕ್ಕಂಥದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಇದ್ದೇವೆ. ಪಾಯಿಂಟ್ ಆಫ್ ರೆಫರೆನ್ಸ್ ಕೊಡುವಾಗ ಆ ಕಮಿಟಿಗಳು ಹೇಳಿರುವಂಥ ವಿಚಾರಗಳನ್ನು ಪರಿಗಣನೆಗೆ ತೆಗೆದುಕೊಳ್ಳಕೆಂದು ನಾವು ಹೇಳುತ್ತೇವೆ. ವರದಿಗಳನ್ನು ಕೊಟ್ಟು ಸುಮಾರು 20 ವರ್ಷಗಳ ವ್ಯತ್ಯಾಸವಿರುವುದರಿಂದ ಈಗ ಹೊಸ ತಜ್ಞರ ಸಮತಿಯನ್ನು ನಾವು ಮಾಡಬೇಕಾಗತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದೇನೆಂದರೆ, ಇದಕ್ಕೊಂದು ನೀತಿ, ನಿಯಮ ಏನೂ

ಇಲ್ಲ. ಹೊಸ ಜಿಲ್ಲೆ ಮತ್ತು ತಾಲ್ಲೂಕು ಮಾಡುವುದುಕ್ಕೂ ಒಂದು ನೀತಿ ನಿಯಮವಿಲ್ಲ. ಮುಖ್ಯ ಮಂತ್ರಿಗಳಿಗೆ ಬೇಕಾಗಿರತಕ್ಕಂಥದನ್ನು ಅವರು ಜಿಲ್ಲೆ ಮಾಡಿಕೊಂಡರು. ಶಿವಮೊಗ್ಗ ಜಿಲ್ಲೆಯನ್ನು ಒಡೆದು ಮೂರು ಜಿಲ್ಲೆಗಳನ್ನು ಮಾಡುವುದಕ್ಕೆ ಮಾನ್ಯ ಉಪ ಮುಖ್ಯ ಮಂತ್ರಿಗಳು ಇನ್ನೂ ಚಿಂತನೆ ಮಾಡಿಲ್ಲ. ಜಿಲ್ಲೆ ಮತ್ತು ತಾಲ್ಲೂಕು ಮಾಡುತ್ತಾ ಹೋಗುವುದಕ್ಕೆ ಏನಾದರೊಂದು ಪ್ರಾಮಾಣಿಕತೆ ಬೇಡವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜಿಲ್ಲೆ ಅಥವಾ ತಾಲ್ಲೂಕುಗಳಾಗಲಿ, ಇವುಗಳಿಗೆ 100–200 ವರ್ಷಗಳ ಇತಿಹಾಸಗಳಿರುತ್ತವೆ. ಕೇವಲ 20 ವರ್ಷಗಳಲ್ಲಿ ಎಂದೂ ಬದಲಾವಣೆಯಾಗುವುದಿಲ್ಲ. ಯಾವುದೇ ಒಂದು ಜಿಲ್ಲೆಯ ಇತಿಹಾಸ ತೆಗೆದುಕೊಂಡರೆ 200, 300, 500 ವರ್ಷಗಳ ಇತಿಹಾಸ ಇರುತ್ತದೆ. ಗೆಜೆಟ್ ನೋಡಿದರೆ ಇದರ ಬಗ್ಗೆ ನಮಗೆ ಗೊತ್ತಾಗುತ್ತದೆ. ಈಗ ಇರತಕ್ಕಂಥ ಭೌಗೋಳಿಕ ಪ್ರದೇಶ ಮಾತ್ರ ಬದಲಾವಣೆಯಾಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಜನಸಂಖ್ಯೆ ಒಂದು ಮಾತ್ರ ವ್ಯತ್ಯಾಸವಾಗಿರುತ್ತದೆ, ಹೊರತು ಬೇರೇನು ಬದಲಾವಣೆಯನ್ನು ನೀವು ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈಗಾಗಲೇ ವರದಿ ಕೊಟ್ಟಿರತಕ್ಕಂಥದ್ದಕ್ಕೆ ಏನು ಬೆಲೆ ಇದೆ? ಅವರು ವರದಿಯಲ್ಲಿ ಕೊಟ್ಟಿರತಕ್ಕಂಥದನ್ನು ಅನುಷ್ಠಾನ ಮಾಡತಕ್ಕಂಥದ್ದು ಮುಂದಕ್ಕೆ ಹೋಗುತ್ತಾ ಬಂತು. ಕಾರಣ ಏನೆಂದರೆ, ಡಿ–ಲಿಮಿಟೇಶನ್ ಕಮಿಟಿ ಬರುತ್ತದೆದು ಮತ್ತು ಡಿ–ಲಿಮಿಟೇಶನ್ ಆದಮೇಲೆ ಮಾಡೋಣವೆಂದು ಮತ್ತು 2001ನೇ ಜನಗಣತಿಯ ಆಧಾರದ ಮೇಲೆ ಡಿ–ಲಿಮಿಟೇಶನ್ ಆಗುತ್ತದೆ. ಆದ್ದರಿಂದ, ಇದೆಲ್ಲಾ ಮುಗಿದ ಮೇಲೆ ಮಾಡೋಣವೆಂದು ಹೇಳಿಕೊಂಡು ಬಂದರೆ ಹೊರತಾಗಿ ಹೊಸ ಕಮಿಟಿ ರಚನೆ ಮಾಡಿ ಹೊಸ ಜಿಲ್ಲೆ ಮತ್ತು ಹೊಸ ತಾಲ್ಲೂಕು ಮಾಡುತ್ತೇವೆಂದು ನಾವು ಹೇಳಲಿಲ್ಲ. ಆದ್ದರಿಂದ, ಮೊದಲು ಇದನ್ನು ಅನುಷ್ಠಾನ ಮಾಡಿ. ಈಗ ರಾಮನಗರ ಮತ್ತು ಚಿಕ್ಕಬಳ್ಳಾಪುರವನ್ನು ನೀವು ಮಾಡಿಕೊಂಡಿಲ್ಲವೇ ಕೇವಲ 2 ಕಡೆ ಮಾತ್ರ ಮಾಡಿದ್ದೀರಿ. ಇಡೀ ಕರ್ನಾಟಕ ರಾಜ್ಯದ ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿ ಇದನ್ನು ಮಾಡಿದ್ದೀರಾ? ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಕ್ಕೆ ತಕ್ಷಣ obey ಮಾಡಿದ್ದೀರಿ. ಆದರೆ, ನಾವು ಇದರ ಬಗ್ಗೆ ಇಷ್ಟು ಜನ ಹೇಳುತ್ತಿದ್ದೇವೆ. ಎಲ್ಲಿ ಭೌಗೋಳಿಕ ಪ್ರದೇಶ ದೊಡ್ಡದಾಗಿದೆ ಅಂಥ ಕಡೆ ಅನುಕೂಲವಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಮತ್ತು ಸೌಥ್ ಕೆನಾರದಲ್ಲಿಯೂ ಕೂಡ ದೊಡ್ಡ ದೊಡ್ಡ ತಾಲ್ಲೂಕುಗಳಿವೆ. ಒಂದೇ ಕ್ಷೇತ್ರದಲ್ಲಿ 5 ಜನ ಶಾಸಕರಿರುವ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ರೀತಿಯಾದರೆ ಅಲ್ಲಿ ಯಾವ ರೀತಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಆದ್ದರಿಂದ, ಹಿಂದಿನ ವರದಿಗಳನ್ನು ಅನುಷ್ಠಾನ ಮಾಡಿ. ಉಳಿದದ್ದಕ್ಕೆ ತಾವು ಬೇಕಾದರೆ ಯೋಚನೆ ಮಾಡಿ ಬೇಡವೆಂದು ನಾವು

ಹೇಳುವುದಿಲ್ಲ. ಏಕೆಂದರೆ, ನಿಮಗೆ ಅನೇಕ ಒತ್ತಡಗಳು ಮತ್ತು applications ಬರುತ್ತವೆ. ಆದರೆ, ಮೊದಲ ಆದ್ಯತೆಯನ್ನು ವಿಶೇಷ ತಹಶೀಲ್ದಾರ್ ಈಗ ಕೊಟ್ಟಿರುವ ಕೊಡಿ. ಮತ್ತೆ ಭೌಗೋಳಿಕವಾಗಿ ಎಲ್ಲಾ ಚೆನ್ನಾಗಿದ್ದು, ಅಡ್ಮಿನಿಸ್ಟ್ರೇಟಿವ್ ಕನ್ವಿನ್ಸ್ ಇರುವದನ್ನೆ ನೋಡಿ ಮಾಡಲಾಗಿದೆ. ಆದ್ದರಿಂದ, ದಯವಿಟ್ಟು ತಾವು ಈ ಕಡೆ ಗಮನ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಜಗದೀಶ್ ಶೆಟ್ಟರ್ ರವರೆ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಮಾಡಿರತಕ್ಕಂಥದಕ್ಕೆ ನಮ್ಮದೇನು ವಿರೋಧವಿಲ್ಲ. ರಾಮನಗರ ಮತ್ತು ಚಿಕ್ಕಬಳ್ಳಾಪುರ ಆಗುತ್ತದೆಂದು ತಮ್ಮಗೂ ಕೂಡ ಗೊತ್ತಿರಲಿಲ್ಲ. ಇದನ್ನು ಮಾಡುವುದಕ್ಕೆ ಯಾವ ಸಮಿತಿ ಶಿಫಾರಸ್ಸು ಮಾಡಿತ್ತು? ಹುಂಡೇಕರ್ ಅಥವಾ ವಾಸುದೇವರಾವ್ ಸಮಿತಿ ಏನಾದರು ಶಿಫಾರಸ್ಸು ಮಾಡಿತ್ತೆ?

ಶ್ರೀ ಜಗದೀಶ್ ಶೆಟ್ಟರ್ : ಡಾ॥ ಬಾಲಸುಬ್ರಮಣಿಯಂ ಅಧ್ಯಕ್ಷತೆಯಲ್ಲಿ ರಚನೆ ಮಾಡಿದಂಥ ಸಮಿತಿ ನೀಡಿದ ವರದಿಯ ಮೇಲೆ ಮಾಡಲಾಗಿದೆ ಎಂದು ಬೆಳಿಗ್ಗೆ ಹೇಳಿದ್ದೇನೆ. ಆ ಸಂದರ್ಭದಲ್ಲಿ ತಾವು ಕೂಡ ಇದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : "ಹುಚ್ಚಮುಂಡಿ ಮದುವೆಯಲ್ಲಿ ಉಂಡವನೆ ಜಾಣ", ಮಾನ್ಯ ಮುಖ್ಯಮಂತ್ರಿಗಳು ಬಹಳ ಜಾಣರಿದ್ದಾರೆ, ಆದ್ದರಿಂದ, ಮಾಡಿಕೊಂಡಿದ್ದಾರೆ. ಆದರೆ, ನನಗೆ ಗೊತ್ತಿಲ್ಲವೆಂದು ಇವರು ಸುಮ್ಮನೆ ಕುಳಿತುಕೊಂಡರು.

ಶ್ರೀ ಜಗದೀಶ್ ಶೆಟ್ಟರ್ : ಹಾಗೇನು ಇಲ್ಲ. ಕಮಿಟಿಯು ನೀಡಿರುವ ವರದಿಯ ಆಧಾರದ ಮೇಲೆ ನಾವು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಬಾಲಸುಬ್ರಮಣಿಯಂ ಸಮಿತಿ ಕೇವಲ ರಾಮನಗರ ಮತ್ತು ಚಿಕ್ಕಬಳ್ಳಾಪುರಕ್ಕ ಸಂಬಂಧಪಟ್ಟಿತ್ತೆ ಅಥವಾ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿತ್ತೆ?

ಶ್ರೀ ಜಗದೀಶ್ ಶೆಟ್ಟರ್ : ನಾಲ್ಕು ಜಿಲ್ಲೆಗಳಾದ ಬೆಳಗಾಂ ಮತ್ತು ಗುಲ್ಬರ್ಗಾ ಹಾಗೂ ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳೂ ಸಹ ಸದರಿ ಸಮಿತಿಯಲ್ಲಿ ಸೇರಿದ್ದವು.

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ. ಮತ್ತೇಕ್ಕೆ ಅದನ್ನೇ ರಿಪಿಟ್ ಮಾಡುತ್ತೀದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಹುಂಡೇಕರ್ ಸಮಿತಿಯನ್ನು ಗುಲ್ಬರ್ಗಾ ಮತ್ತು ಬೆಳಗಾಂನ್ನು ಗುರುತಿಸಿದ್ದಾರೆ. ಜೆ.ಹೆಚ್. ಪಟೇಲ್ ಕಾಲದಲ್ಲಿ ವರದಿ ಕೊಡಲಾಗಿತ್ತು. ಆದರೆ, ಆಗಿರಲಿಲ್ಲ, ಆ ವಿಚಾರ ಬೇರೆ. ಆದರೆ, ನೀವು ಈಗ ಹುಂಡೇಕರ್ ವರದಿಯನ್ನು ಇಟ್ಟುಕೊಂಡು ಅದರ ಶಿಫಾರಸ್ಸಿನ ಮೇಲೆ

ಮಾಡಬಹುದಿತ್ತಲ್ಲವೇ? ಬಾಲಸುಬ್ರಮಣೀಯಂನವರು ಈಗ ಕೇವಲ 2 ತಾಲ್ಲೂಕುಗಳಿಗೆ ಸೀಮಿತವಾಗಿ ಮಾಡಿದ್ದಾರೆಯೇ? ಅವರು ಇಡೀ ರಾಜ್ಯಕ್ಕೆ ಮಾಡಬೇಕಾಗಿತ್ತು. ಇಡೀ ರಾಜ್ಯಕ್ಕೆ ಮಾಡಿ ಸಂಪೂರ್ಣ ವರದಿ ಕೊಡಿ ಎಂದು ಕೇಳಬೇಕಾಗಿತ್ತು. ಈಗ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಆಗಿರತಕ್ಕಂಥದ್ದು ನಿಮಗೆ ಪ್ರಾಮಾಣಿಕವಾಗಿ ಗೊತ್ತಿತ್ತೇ? ಮಾನ್ಯ ಯಡಿಯೂರಪ್ಪನವರೆ, ನಿಮಗೆ ಗೊತ್ತಿತ್ತಾ? ಪ್ರಾಮಾಣಿಕವಾಗಿ ಹೇಳಿ? ಈ ವಿಷಯ ಯಾರಿಗೂ ಗೊತ್ತಿರಲಿಲ್ಲ. ಇದು ರಾತ್ರೋರಾತ್ರಿಯಾಗಿರತಕ್ಕಂಥದ್ದು, ಇದರ ಬಗ್ಗೆ ನನ್ನ ವಿರೋಧ ಇಲ್ಲ. ಆದರೆ, ನನಗೆ ಸಂಕೋಚವಾಗುತ್ತಿದೆ.

ಉಪಾಧ್ಯಕ್ಷರು : ಮಾನ್ಯ ಗಡ್ಡದೇವರಮಠ್‌ರವರೆ, ಮಾನ್ಯ ಸಚಿವರು ಇನ್ನೂ ಉತ್ತರ ಹೇಳಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಈ ಪ್ರಶ್ನೆಯನ್ನೇ ತೆಗೆದುಕೊಳ್ಳಬಾರದಾಗಿತ್ತು, ಅಡ್ಜರ್ನ್ ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗಡ್ಡದೇವರಮಠ್‌ರವರೆ, ತಾವು ಈಗಾಗಲೇ ಸಾಕಷ್ಟು ವಿಚಾರವನ್ನು ಹೇಳಿದ್ದೀರಿ. ಈ ಸಮಿತಿಯನ್ನು ಮಾಡುವಾಗ ಹಿಂದಿನ ಸಮಿತಿಗಳು ನೀಡಿರತಕ್ಕಂಥ ವಿಚಾರಗಳನ್ನು ಕನ್ಸಿಡರ್ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕೆಂದು ಮಾನ್ಯ ಖರ್ಗೆಯವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಜಿ.ಎಸ್. ಗಡ್ಡದೇವರಮಠ್ : ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು : ಈಗಾಗಲೇ ತಾವು ಕೇಳಿದ್ದೀರಿ, ಮತ್ತೇನು ಕೇಳುತ್ತೀರಿ?

ಶ್ರೀ ಜಿ.ಎಸ್. ಗಡ್ಡದೇವರಮಠ್ : ತಾವು ನನಗೆ ಯಾವಗಲಾದರೂ ಒಂದು ಸಾರಿ ಅವಕಾಶ ಕೊಡುತ್ತೀರಿ. ದಯವಿಟ್ಟು ನನಗೆ ಒಂದು ನಿಮಿಷ ಅವಕಾಶ ಕೊಡಿ.

ಉಪಾಧ್ಯಕ್ಷರು : ಆಯಿತು ಕುಳಿತುಕೊಳ್ಳಿ. ಈಗಾಗಲೇ ಅರ್ಧ ಗಂಟೆ ಮಾತನಾಡಿದ್ದೀರಿ. ಮತ್ತೆ ಬೆಳಿಗ್ಗೆ ಕೂಡ ಇದರ ಬಗ್ಗೆ ಮಾತನಾಡಿದ್ದೀರಿ. ಮತ್ತೇ ಹೇಳಿದ್ದನ್ನೆ ಹೇಳೂತ್ತಿದ್ದೀರಿ.

ಶ್ರೀ ಜಿ.ಎಸ್. ಗಡ್ಡದೇವರಮಠ್ : ಹೊಸ ಕಮಿಟಿಯನ್ನು ರಚನೆ ಮಾಡತಕ್ಕಂಥದನ್ನು ಹೃದಯ ಪೂರ್ವಕವಾಗಿ ನಾವು ಸ್ವಾಗತ ಮಾಡುತ್ತೇವೆ, ಇದರಲ್ಲಿ ಎರಡನೇ ಮಾತಿಲ್ಲ. ಆದರೆ, ಈಗ ರಚನೆ ಮಾಡುವ ತಜ್ಞರ ಸಮಿತಿ ವಿಚಾರಣೆ ಮಾಡುವುದಕ್ಕೆ ಈಗ ಇರತಕ್ಕಂಥ ಹೊಸ ಮನವಿಗಳನ್ನು ಮಾತ್ರ ವಿಚಾರಣೆ ಮಾಡುವುದಕ್ಕೆ ಕೊಡಿ. ನಮ್ಮ ಊರುಗಳ ಬಗ್ಗೆ ಈಗಾಗಲೇ ಮೂರು ತಜ್ಞರ ಸಮಿತಿ ಶಿಫಾರಸ್ಸು ಮಾಡಿರುವುದರಿಂದ ಮತ್ತೆ ನಮ್ಮದನ್ನು ಕೊಡಬೇಡಿ ಎಂಬುದು ನಮ್ಮ ಪ್ರಾರ್ಥನೆಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಖರ್ಗೆಯವರೂ ಸಹ ಇದನ್ನೇ ಹೇಳಿದ್ದಾರೆ, ತಾವೂ ಕೂಡ ಇದ್ದನ್ನೇ ಹೇಳುತ್ತಿದ್ದೀರಿ. ತಜ್ಞರ ಸಮಿತಿ ಮಾಡಿ ಪಾಯಿಂಟ್ ಆಫ್ ರೆಫರೆನ್ಸ್ ಕಳುಹಿಸುವಾಗ ಈ ಎಲ್ಲಾ ವಿಚಾರವನ್ನು ಕನ್ಸಿಡರ್ ಮಾಡಿಕೊಂಡು ನಾವು ನಿರ್ಣಯ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

7) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

ವಿಷಯ : ನಕ್ಸಲೈಟ್ ಕಾರ್ಯಾಚರಣೆಯಲ್ಲಿ ಗುಂಡೇಟಿನಿಂದ ಪೋಲೀಸ್ ಅಧಿಕಾರಿ ವೆಂಕಟೇಶ್‌ರವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮೊನ್ನೆ ದಿವಸ ನಕ್ಸಲೇಟ್ ಕಾರ್ಯಾಚರಣೆಯಲ್ಲಿ ಗುಂಡೇಟಿನಿಂದ ಮಾಡಿದಂಥ ಪೊಲೀಸ್ ಅಧಿಕಾರಿ ವೆಂಕಟೇಶ್‌ರವರ ಮರಣದ ಬಗ್ಗೆ ನಾನು ಪ್ರಸ್ತಾಪವನ್ನು ಮಾಡಿದ್ದೆ. ಇವತ್ತು ಮಾನ್ಯ ಗೃಹ ಸಚಿವರು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ದಯಮಾಡಿ ಅವರು ಒಂದು ಹೇಳಿಕೆಯನ್ನು ಕೊಡಬೇಕು, ಆ ಕುಟುಂಬಕ್ಕೆ ಪರಿಹಾರವನ್ನು ಸೂಕ್ತ ರೀತಿಯಿಂದ ಕೊಡಿಸಬೇಕೆಂದು ನಾನು ಮತ್ತೊಮ್ಮೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೆ, ವೆಂಕಟೇಶ್‌ರವರು ಏನು ಮೃತಪಟ್ಟಿದ್ದಾರೆ, ಅದಕ್ಕೆ ವಿಷಾದ ಮತ್ತು ಖೇದವಾಗಿದೆ. ಆ ಸಂದರ್ಭದಲ್ಲಿ ನಿಮ್ಮ ಪೊಲೀಸ್ ಮಹಾ ನಿರ್ದೇಶಕರು ಅಲ್ಲಿಗೆ ಭೇಟಿ ಕೊಟ್ಟು ಅವರ ಕುಟುಂಬಕ್ಕೆ ಸಾಂತ್ವನವನ್ನು ಹೇಳುವುದಕ್ಕೆ ಅಲ್ಲದೆ 5 ಲಕ್ಷ ರೂ. ಗಳ ಪರಿಹಾರ ಧನವನ್ನು ಅವರ ಕುಟುಂಬಕ್ಕೆ ಕೊಡುತ್ತೇವೆ. ಅದಾದ ನಂತರ ಅವರು ನಿವೃತ್ತಿಯಾಗುವವರೆಗೂ ಯಾವ ಸಂಬಳ ಸಾರಿಗೆಯನ್ನು ತೆಗೆದುಕೊಳ್ಳುತ್ತಿದ್ದರು ಆ ಇಡೀ ಮೊತ್ತವನ್ನು ಅವರ ಕುಟುಂಬದ ವಾರಸುದಾರರಿಗೆ ಕೊಡುತ್ತೇವೆ. ಅವರ ನಿವೃತ್ತಿಯ ನಂತರ ಪಿಂಚಣಿ ವೇತನವನ್ನು ಅವರ ಕುಟುಂಬ ವರ್ಗದವರಿಗೆ ಕೊಡುತ್ತೇವೆ. ಎಸ್.ಎಸ್.ಎಲ್.ಸಿ. ಪಾಸಾದ ಒಬ್ಬ ಮಗ ಅವರಿಗೆ ಇದ್ದಾನೆ. ಆತನಿಗೆ ಶಿವಮೊಗ್ಗದಲ್ಲಿ ದ್ವೀತಿಯ ದರ್ಜೆ ಗುಮಾಸ್ಥನೆಂದು ಕೆಲಸವನ್ನು ಕೊಡುತ್ತೇವೆ. ಬಹುಶ ಇಲ್ಲಿಯವರೆಗೆ ಇಷ್ಟು ಉದಾರವಾದ ಒಂದು ಕೊಡುಗೆಯನ್ನು ಕೊಟ್ಟಿರಲಿಲ್ಲ. ಆದರೆ ಅವರು ತೋರಿಸಿದಂಥ ಒಂದು ಅಪ್ರತಿಮ ಶೌರ್ಯ ಮತ್ತು ಆದಂಥ ದುರಂತಕ್ಕೆ ಮಾನ್ಯ ಶಾಸಕರೆಲ್ಲರೂ ಒತ್ತಾಯ ಮಾಡಿದ್ದಕ್ಕಾಗಿ ಅವರನ್ನು ಅಭಿನಂದಿಸಿ ಈ ಒಂದು ಘೋಷಣೆಯನ್ನು ಮಾಡಲಿಕ್ಕೆ ನಾನು ಇಷ್ಟಪಡುತ್ತೇನೆ.